ELECTION URGENT

सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ರಾಜ್ಯ ಚುನಾವಣಾ ಆಯೋಗದ ನಡವಳಿ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ – 2015ರ ಸಾರ್ವತ್ರಿಕ ಚುನಾವಣೆ – ಸಾರ್ವಜನಿಕ ಸಭೆ ಹಾಗೂ ಇತರ ಪ್ರಚಾರಗಳನ್ನು ಮುಕ್ತಾಯಗೊಳಿಸುವ ಕುರಿತು.

-:-:-:-

**ಪ್ರಸ್ತಾವನೆ:**

ರಾಜ್ಯ ಚುನಾವಣಾ ಆಯೋಗವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ – 2015ರ ಸಾರ್ವತ್ರಿಕ ಚುನಾವಣೆ ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದೆ. ವೇಳಾಪಟ್ಟಿಯಂತೆ **ದಿ:22-8-2015** ರಂದು ಮತದಾನ ನಡೆಯಲಿದೆ. ಚುನಾವಣೆಗಳನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತವಾಗಿ ನಡೆಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದು ಅತ್ಯವಶ್ಯವಿರುತ್ತದೆ. ಈ ಸಂಬಂಧ ರಾಜಕೀಯ ಪಕ್ಷಗಳು, ಸ್ಪರ್ಧಿಸುವ ಅಭ್ಯರ್ಥಿಗಳು ಹಾಗೂ ಅಭ್ಯರ್ಥಿಗಳ ಪರವಾಗಿ ಯಾರೇ ಇತರರು ತಮ್ಮ ಪ್ರಚಾರವನ್ನು ಮುಕ್ತಾಯ ಮಾಡುವ ಸಮಯದ ಬಗ್ಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಪ್ರಕರಣ 41ರಲ್ಲಿ ನಿರ್ದಿಷ್ಟಪಡಿಸಿದೆ. ಇತ್ತೀಚೆಗೆ ಚುನಾವಣಾ ಪ್ರಚಾರದ ಬಗ್ಗೆ ಹಲವಾರು ಆಧುನಿಕ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಚುನಾವಣಾ ಪ್ರಚಾರಕ್ಕಾಗಿ ಬಳಸುತ್ತಿರುವ ಇಂತಹ ಆಧುನಿಕ ವಿಧಾನಗಳನ್ನು ಹಾಗೂ ಚುನಾವಣಾ ಪ್ರಚಾರದ ವೇಳೆಯ ಬಗ್ಗೆ ನಿರ್ಬಂಧ ವಿಧಿಸುವುದು ಅತ್ಯಗತ್ಯವಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ 64 ಇಯುಬಿ 2015**
**ಬೆಂಗಳೂರು, ದಿನಾಂಕ:3-8-2015**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ – 2015ರ ಸಾರ್ವತ್ರಿಕ ಚುನಾವಣೆಯು ಶಾಂತಿಯುತವಾಗಿ, ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಸುವ ಉದ್ದೇಶದಿಂದ ರಾಜ್ಯ ಚುನಾವಣಾ ಆಯೋಗವು ಸಂವಿಧಾನದ ಅನುಚ್ಛೇದ 243ಕೆ ಜೊತೆಗೆ ಓದಲಾದಂತೆ ಅನುಚ್ಛೇದ 243 ಝಡ್ಎ ಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಮತ ಪ್ರಚಾರದ ಬಗ್ಗೆ ಈ ಕೆಳಕಂಡ ಕೃತ್ಯಗಳನ್ನು ಮತದಾನ ಪ್ರಾರಂಭಕ್ಕೆ ನಿಗದಿಪಡಿಸಿದ ಸಮಯದ ಹಿಂದಿನ 48 ಗಂಟೆಗಳ ಅವಧಿಯಲ್ಲಿ ಯಾವುದೇ ರಾಜಕೀಯ ಪಕ್ಷವಾಗಲೀ ಅಥವಾ ಅಭ್ಯರ್ಥಿಗಳಾಗಲೀ ಅಥವಾ ಅವರ ಪರವಾಗಿ ಅವರ ಬೆಂಬಲಿಗರಾಗಲೀ ಮಾಡತಕ್ಕದ್ದಲ್ಲವೆಂದು ಈ ಮೂಲಕ ಆದೇಶಿಸಿದೆ. ಈ ಕ್ರಮಗಳನ್ನು ಉಲ್ಲಂಘಿಸಿದವರು ಕಾಯ್ದೆ ಮತ್ತು ಕಾನೂನಿನ ಪ್ರಕಾರ ಶಿಕ್ಷಾರ್ಹರಾಗುತ್ತಾರೆ.

1) ಸಾರ್ವಜನಿಕ ಸಭೆ ಮತ್ತು ಸಮಾರಂಭ – ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತಹವುಗಳ ಏರ್ಪಡಿಸತಕ್ಕದ್ದಲ್ಲ.
2) ಮತದಾರರಿಗೆ ಮೊಬೈಲ್ ಮೂಲಕ ಎಸ್.ಎಂ.ಎಸ್. ಕಳುಹಿಸತಕ್ಕದ್ದಲ್ಲ.
3) ಎಫ್.ಎಂ. ರೇಡಿಯೋ, ಟಿವಿ ಚಾನಲ್ ಮಾಧ್ಯಮಗಳ ಮೂಲಕ ಪ್ರಚಾರ ಮಾಡತಕ್ಕದ್ದಲ್ಲ.
4) ಮತದಾರರಿಗೆ ವಿಡಿಯೋ ಕ್ಲಿಪ್ಪಿಂಗ್ಸ್ ಪ್ರದರ್ಶಿಸತಕ್ಕದ್ದಲ್ಲ.
5) ದಿನಪತ್ರಿಕೆಗಳಲ್ಲಿ ಜಾಹೀರಾತು ಹೊರಡಿಸತಕ್ಕದ್ದಲ್ಲ.

ಆದೇಶಾನುಸಾರ

K. Ditharane 3/8/15
(ಕವಿತಾರಾಣಿ.ಆರ್)
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

<u>ಪ್ರತಿಯನ್ನು:</u>

1) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
2) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
3) ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಬೆಂಗಳೂರು.
4) ಪೊಲೀಸ್ ಮಹಾ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ.

ELECTION URGENT

सत्यमेव जयते

# STATE ELECTION COMMISSION, KARNATAKA

Sub: Restriction on presence of political functionaries in a ward after campaign period is over.

-:-:-:-

In exercise of powers under Article 243 ZA read with Article 243k of the Constitution of India, the State Election Commission, Karnataka hereby orders that the following directions come into effect from 7-00 AM on 20-08-2015.

**ORDER NO. SEC 64 EUB 2015, BANGALORE, DATED: 03-08-2015**

1. During the course of campaign in BBMP Election 2015 the political parties mobilize their supporters including from outside the ward of poll in order to booster the campaign. In view of the fact that after 7-00 AM of 20-08-2015, the presence of political functionaries/party workers/ procession functionaries / campaign functionaries etc., who have been brought for campaign, from outside the ward and who are not voters of the ward, should not continue to remain present in the ward as their continued presence may cause disturbance to the atmosphere for free and fair poll.

2. Hence the commission has directed that after 7-00AM on 20-08-2015 the District Election Administration / Police administration shall ensure that all such functionaries leave the ward immediately. This shall be brought to the notice of all political parties, candidates and their agents in order to enable them to comply.

3. The Commission further directs that in order to ensure that the above instruction is carried out the election administration/Police administration may take all necessary measures which may include.

    1) Checking of kalyanamantapams / community halls etc. where such people are kept housed and find out whether the outsiders have been accommodated in these premises.
    2) Verification of lodges and guest houses to keep a track of the list of occupants.
    3) Set up check posts in the ward borders and track the vehicular movement from outside the ward.
    4) Verify the identity of the people/group of people in order to find out whether they are voters or not and establish their identity.
    5) This may be brought to the notice of all concerned and ensure strict compliance. Action taken in the matter may be informed to the commission.

By Order

(Signature) 3/8/15

Under Secretary

State Election Commission, Karnataka

Bangalore

**Copy to:**

1) Commissioner, Bruhat Bengaluru Mahanagara Palike, Bengaluru.
2) Police Commissioner, Bangalore City.